# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 139 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13-09-2022 |
| ಉತ್ತರಿಸುವ ಸಚಿವರು | : | ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಾತೃ ಪೂರ್ಣ ಯೋಜನೆ ಯಾವ ರೀತಿಯಲ್ಲಿ ಅನುಷ್ಠಾನವಾಗುತ್ತಿದೆ; (ಸಂಪೂರ್ಣ ಮಾಹಿತಿ ನೀಡುವುದು) | ಗರ್ಭಿಣಿ ಮತ್ತು ಬಾಣಂತಿಯರಿಗೆ ಮಧ್ಯಾಹ್ನದ ಒಂದು ಪೌಷ್ಠಿಕ ಬಿಸಿಯೂಟ ನೀಡುವ ಮಾತೃ ಪೂರ್ಣ ಯೋಜನೆಯನ್ನು ಅಕ್ಟೋಬರ್-2017 ರಿಂದ ರಾಜ್ಯಾದ್ಯಂತ ಜಾರಿಗೆ ತರಲಾಗಿದೆ. ಸದರಿ ಯೋಜನೆಯಡಿ ಪ್ರತಿ ಫಲಾನುಭವಿಗೆ ರೂ. 21/- ರ ಘಟಕ ವೆಚ್ಚದಲ್ಲಿ ಮಧ್ಯಾಹ್ನದ ಪೌಷ್ಠಿಕ ಬಿಸಿಯೂಟವನ್ನು ಅಂಗನವಾಡಿ ಕೇಂದ್ರದಲ್ಲಿಯೇ ತಯಾರಿಸಿ ನೀಡಲಾಗುತ್ತಿದೆ. ಈ ಬಿಸಿಯೂಟವು ಅನ್ನ, ಸಾಂಬಾರ್, ಪಲ್ಯ, ಒಂದು ಮೊಟ್ಟೆ, 200 ಎಂ.ಎಲ್.ಹಾಲು ಮತ್ತು ಶೇಂಗಾಚಿಕ್ಕಿ ಒಳಗೊಂಡಿರುತ್ತದೆ.<br><br>ಕೋವಿಡ್-19 ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಅಂಗನವಾಡಿ ಕೇಂದ್ರಗಳು ಮುಚ್ಚಿದ ಸಂದರ್ಭದಲ್ಲಿ ಗರ್ಭಿಣಿ/ ಬಾಣಂತಿಯರಿಗೆ ಅವರ ಮನೆ ಬಾಗಿಲಿಗೆ ಕಚ್ಚಾ ಆಹಾರ ಸಾಮಗ್ರಿಗಳನ್ನು ವಿತರಿಸಲಾಗುತ್ತಿತ್ತು.<br><br>ದಿನಾಂಕ: 14-02-2022 ರಿಂದ ಅಂಗನವಾಡಿ ಕೇಂದ್ರಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಒಳಗೊಂಡಂತೆ ರಾಜ್ಯಾದ್ಯಂತ ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಅಂಗನವಾಡಿ ಕೇಂದ್ರದಲ್ಲಿಯೇ ಮಧ್ಯಾಹ್ನದ ಪೌಷ್ಠಿಕ ಬಿಸಿಯೂಟವನ್ನು ನೀಡಲಾಗುತ್ತಿದೆ. . |
| ಆ. | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಾತೃ ಪೂರ್ಣ ಯೋಜನೆಯ ಅನುಷ್ಠಾನದಲ್ಲಿ ಸಮಸ್ಯೆಗಳು ತಲೆದೂರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಗುಡ್ಡಗಾಡು ಪ್ರದೇಶಗಳಲ್ಲಿ ಮಾತೃಪೂರ್ಣ ಯೋಜನೆಯ ಅನುಷ್ಠಾನದಲ್ಲಿನ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ದಕ್ಷಿಣ ಕನ್ನಡ ಮತ್ತು ಉಡುಪಿ ಒಳಗೊಂಡಂತೆ ಮಲೆನಾಡು ಮತ್ತು ಗುಡ್ಡಗಾಡು ವ್ಯಾಪ್ತಿಯ ಜಿಲ್ಲೆಗಳಲ್ಲಿ ಗುಂಪು ಮನೆಗಳು ಇಲ್ಲದೇ ಮನೆಗಳು ದೂರ-ದೂರ ಇರುವುದರಿಂದ ಹಾಗೂ ಗರ್ಭಿಣಿ/ ಬಾಣಂತಿಯರು ಗುಡ್ಡಗಾಡು ಪ್ರದೇಶ ದಾಟಿ ಅಂಗನವಾಡಿ ಕೇಂದ್ರಕ್ಕೆ ಬಂದು ಬಿಸಿಯೂಟ ಸೇವಿಸಲು ಕಷ್ಟಕರವಾಗಿದ್ದು, ಫಲಾನುಭವಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿರುತ್ತದೆ. |

....2.

| | | |
|---|---|---|
| ಇ. | ಮಾತೃ ಪೂರ್ಣದಂತಹ ಕೆಲವು ಯೋಜನೆಗಳು ಸ್ಥಳ ಕೇಂದ್ರಿತವಾಗದಿರುವುದರಿಂದ ತಳಮಟ್ಟದಲ್ಲಿ ವಿಫಲವಾಗುತ್ತಿರುವ ಕುರಿತು ಸರ್ಕಾರ ಏನು ಕ್ರಮ ವಹಿಸಿದೆ? (ಸಂಪೂರ್ಣ ಮಾಹಿತಿ ನೀಡುವುದು) | ಮಾತೃಪೂರ್ಣ ಯೋಜನೆಯಡಿ 8 ತಿಂಗಳು ತುಂಬಿದ ಗರ್ಭಿಣಿಯರಿಗೆ ಹಾಗೂ ಹೆರಿಗೆಯಾದ 45 ದಿನಗಳವರೆಗಿನ ಬಾಣಂತಿಯರಿಗೆ ಬಿಸಿಯೂಟವನ್ನು ಮನೆಗೆ ನೀಡಲು ಅವಕಾಶ ಕಲ್ಪಿಸಲಾಗಿದೆ. ಮುಂದುವರೆದು, ವೈದ್ಯಕೀಯ ಕಾರಣದ ಮೇಲೆ ಅಂಗನವಾಡಿ ಕೇಂದ್ರಕ್ಕೆ ಹಾಜರಾಗಲು ಸಾಧ್ಯವಾಗದ ಗರ್ಭಿಣಿ, ಬಾಣಂತಿಯರಿಗೆ ಅವರ ಮನೆಯ ಸದಸ್ಯರ ಮೂಲಕ ಬಿಸಿಯೂಟವನ್ನು ಮನೆಗೆ ತೆಗೆದುಕೊಂಡು ಹೋಗಲು ಸಹ ಅವಕಾಶ ಕಲ್ಪಿಸಲಾಗಿದೆ.<br><br>ಇದಲ್ಲದೇ, ಈ ವರ್ಷದ ಮಳೆಗಾಲ ಮುಗಿಯುವವರೆಗೂ ಸಹ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಕೊಡಗು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳ ಗುಡ್ಡಗಾಡು ಪ್ರದೇಶಗಳಲ್ಲಿನ ಮಾತೃಪೂರ್ಣ ಯೋಜನೆಯಡಿಯ ಫಲಾನುಭವಿ ಗರ್ಭಿಣಿ ಮತ್ತು ಬಾಣಂತಿಯರಲ್ಲಿ ಯಾರಿಗಾದರೂ ಅಂಗನವಾಡಿ ಕೇಂದ್ರಗಳಿಗೆ ಬಂದು ಹೋಗಲು ಅನಾನುಕೂಲತೆ ಇದ್ದಲ್ಲಿ, ಅವರ ಮನವಿ ಮೇರೆಗೆ ಕಚ್ಚಾ ಆಹಾರ ಪದಾರ್ಥಗಳನ್ನು (Take Home Ration) ಮನೆಗೆ ತೆಗೆದುಕೊಂಡು ಹೋಗಲು ಅವಕಾಶ ನೀಡಲು ನಿರ್ದೇಶನ ನೀಡಲಾಗಿದೆ. |

**ಸಂ:** ಮಮಇ 263 ಐಸಿಡಿ 2022

Halappa BA

**(ಆಚಾರ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಸಚಿವರು

# Karnataka Legislative Council

| | | |
|---|---|---|
| Starred Question Number | : | 139 |
| Name of the Member | : | Sri. Manjunath Bhandari (Elected from Assembly) |
| Date of Reply | : | 13-09-2022 |
| To be Replied by | : | Hon'ble Minister for Mines and Geology, Women and Child Development, Empowerment of Differently Abled and Senior Citizens. |

| Sl. No. | Question | Answer |
|---|---|---|
| a) | How Matrupurna Scheme is being implemented in Dakshina Kannada and Udupi districts; (provide complete information) | "Matrupurna Scheme" providing Nutritional Hot cooked meal for Pregnant and Lactating mothers is implemented throughout the State from October-2017. Under the Scheme, nutritious mid-day meals is prepared and served at Anganwadi Centers at a unit cost of Rs. 21/- per beneficiary. This meal includes Rice, Sambar, Leafy Vegetables, 01 Egg, 200 ml Milk and Groundnut Chikki.<br><br>Due to closure of Anganwadi Centers during the Covid-19 pandemic, raw food items were being distributed to Pregnant/Lactating mothers at their door steps.<br><br>Now Anganwadi Centers are functioning full time from 14-02-2022, Pregnant and Lactating mothers are being provided with Nutritious Hot cooked meal at Anganwadi Centers throughout the State including Dakshina Kannada & Udupi Districts. |
| b) | Does it come to the notice of the Government regarding the problems in implementation of Matrupurna Scheme in Dakshina Kannada and Udupi districts; (provide complete information) | Problem in implementation of Matrupurna Scheme at Hill Station of Dakshina Kannada and Udupi districts has come to the notice of the Government.<br><br>Since, there are no group houses and are being located far-flung in the districts like Malenadu and Hills Stations including Dakshina Kannada and Udupi, and it is difficult for Pregnant/ Lactating mothers to come across hilly area to consume hot meals at Anganwadi centres, the number of benificiaries is considerably less. |

...2.

| | | |
|---|---|---|
| c) | What action being taken by the Government on some projects like Matrupurna failing at the grass root level as they are not location-centric?<br>(Provide complete information) | Under the Mathrupurna scheme, Pregnant women who are at 8 month of Pregnancy and Lactating mothers up to 45 days after delivery are allowed to take hot cooked meals to their homes. Further, Pregnant women who are unable to attend the Anganwadi Center due to medical reasons have also been allowed to take the hot cooked meals to their homes through their family members.<br><br>Apart from this, direction has been issued to allow the beneficiaries of Mathrupurna Scheme viz., Pregnant Women and Lactating Mothers who are unable to visit Anganwadi centres on their requests to take "Take Home Ration" to their houses till completion of this year rainy season in Dakshina Kannada, Uttara Kannada, Udupi, Kodagu, Chikkamagaluru, Hassan Districts. |

No. WCD 263 ICD 2022

**(ACHAR HALAPPA BASAPPA)**
Minister for Mines and Geology,
Women and Child Development, Empowerment of
Differently Abled and Senior Citizens